ಅ) ಸಾರಿಗೆ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆಯಿದ್ದು, ನೇಮಕಾತಿ ಪ್ರಕ್ರಿಯೆಯು ಈ ಕೆಳಕಂಡ ಆಡಳಿತಾತ್ಮಕ ಕಾರಣಗಳಿಗಾಗಿ ವಿಳಂಬವಾಗಿರುತ್ತದೆ.

1) ಹೈದರಾಬಾದ್–ಕರ್ನಾಟಕದ ಅಭ್ಯರ್ಥಿಗಳಿಗೆ ಮೀಸಲಾತಿಯನ್ನು ಕಾಯ್ದಿರಿಸುವುದು.(371–ಜೆ)

2) ಮೋಟಾರು ವಾಹನ ನಿರೀಕ್ಷಕರುಗಳ ನೇಮಕಾತಿಯ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿನ ತಡೆಯಾಜ್ಞೆ ಇರುವುದು.

ಇದರ ಜೊತೆಗೆ ಹಾಲಿ ಇರುವ ಸಿಬ್ಬಂದಿಯಲ್ಲಿಯೇ ಕಛೇರಿಯ ಕೆಲಸಕಾರ್ಯಗಳು, ಜಾರೀಘಟಕ ಮತ್ತು ತನಿಖಾ ಠಾಣೆಗಳ ಕೆಲಸಗಳನ್ನು ಸಹ ನಿರ್ವಹಿಸಬೇಕಾಗಿರುತ್ತದೆ.

ಮೇಲ್ಕಂಡ ಕಾರಣಗಳಿಂದಾಗಿ 2013–14ನೇ ಸಾಲಿನಲ್ಲಿ ಮಂಜೂರಾಗಿರುವ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗಳನ್ನು ಪೂರ್ಣಪ್ರಮಾಣದಲ್ಲಿ ಕಾರ್ಯಚರಣೆಗೊಳಿಸಲು ಸಾಧ್ಯವಾಗಿರುವುದಿಲ್ಲ.

ಆದ್ದರಿಂದ ರಾಣೇಬೆನ್ನೂರಿನಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯನ್ನು ಪ್ರಾರಂಭ ಮಾಡುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಆ) ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಾಣೇಬೆನ್ನೂರಿನಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯನ್ನು ಪ್ರಾರಂಭ ಮಾಡುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ

196(317); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ)

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅರ್ಹ ನಿರುದ್ಯೋಗಿಗಳನ್ನು ನೇರ ನೇಮಕಾತಿ ಮೂಲಕ ತುಂಬುವ ಪ್ರಕ್ರಿಯೆ ಪ್ರಗತಿಯಲ್ಲಿದೆಯೇ;

ಆ) ಕಳೆದ ವರ್ಷಗಳಲ್ಲಿ ನೇಮಕಗೊಂಡ ಉದ್ಯೋಗಿಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

ಇ) ಹಾಗಾದರೆ, ವಿವಿಧ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳೆಷ್ಟು; ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು; (ವಿವರ ನೀಡುವುದು)?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಹೌದು

ಆ) ಬ್ಯಾಕ್‌ಲಾಗ್ ಹುದ್ದೆಗಳ ವಿಶೇಷ ನೇಮಕಾತಿ ನಿಯಮಗಳ ಅಡಿಯಲ್ಲಿ ಕಳೆದ 2 ವರ್ಷಗಳಲ್ಲಿ ಈ ಕೆಳಕಂಡಂತೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ.

2012–13			2013–14		
ಪ.ಜಾತಿ	ಪರಿಶಿಷ್ಟ ವರ್ಗ	ಒಟ್ಟು	ಪ.ಜಾತಿ	ಪರಿಶಿಷ್ಟ ವರ್ಗ	ಒಟ್ಟು
177	63	240	109	54	163

ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಇ) ರಾಜ್ಯದಲ್ಲಿ ವಿವಿಧ ಸರ್ಕಾರಿ ಇಲಾಖೆ/ನಿಗಮ/ಮಂಡಳಿ/ಸಹಕಾರ ಸಂಸ್ಥೆ/ವಿಶ್ವವಿದ್ಯಾಲಯ ಅನುದಾನಿತ ಸಂಸ್ಥೆಗಳಲ್ಲಿ ಗುರುತಿಸಲಾಗಿರುವ ಹಾಗೂ ಭರ್ತಿ ಮಾಡಲಾಗಿರುವ ಹಾಗೂ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ವಿಷಯ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು

1	ಗುರುತಿಸಲಾದ ಒಟ್ಟು ಹುದ್ದೆಗಳು	14625	4490	19115
2	ಈಗಾಗಲೇ ಭರ್ತಿ ಮಾಡಲಾಗಿರುವ ಹುದ್ದೆಗಳು	12214	3498	15712
3	ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳು	2411	992	3403
4	ಭವಿಷ್ಯವರ್ತಿಯಾಗಿ ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ	1618	637	2255
5	ಭರ್ತಿಯಿಂದ ವಿನಾಯಿತಿ ನೀಡಲಾದ ಹುದ್ದೆಗಳ ಸಂಖ್ಯೆ	166	72	238
6	ಭರ್ತಿ ಮಾಡಲು ಅಧಿಸೂಚನೆ ಹೊರಡಿಸಿರುವ ಹುದ್ದೆಗಳು	627	283	910
	i) ಈಗಾಗಲೇ ಭರ್ತಿ ಮಾಡಲು ಪ್ರಕಟಣೆ ಹೊರಡಿಸಿರುವ ಹುದ್ದೆಗಳ ಸಂಖ್ಯೆ	324	145	469
	ii) ಭರ್ತಿ ಮಾಡಲು ಪ್ರಕಟಣೆ ಹೊರಡಿಸಬೇಕಾದ ಹುದ್ದೆಗಳ ಸಂಖ್ಯೆ	303	138	441

ಈಗಾಗಲೇ ಗುರುತಿಸಲಾಗಿರುವ 19115 ಬ್ಯಾಕ್‌ಲಾಗ್ ಹುದ್ದೆಗಳಲ್ಲಿ 15712 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, 3403 ಹುದ್ದೆಗಳನ್ನು ಭರ್ತಿ ಮಾಡಲು ಬಾಕಿ ಇರುತ್ತದೆ. ಇವುಗಳಲ್ಲಿ 2255 ಹುದ್ದೆಗಳಿಗೆ ಮುಂದೆ ಭವಿಷ್ಯದಲ್ಲಿ ಹುದ್ದೆಗಳ ನಿವೃತ್ತಿ, ಇನ್ನಿತರ ಕಾರಣಗಳಿಂದ ಉದ್ಭವವಾಗುವ ಹುದ್ದೆಗಳಿಂದ ಭರ್ತಿ ಮಾಡಬೇಕಾಗುತ್ತದೆ. 238 ಹುದ್ದೆಗಳನ್ನು ರೋಗಗ್ರಸ್ಥ, ಸಂಸ್ಥೆ ಮುಚ್ಚಲ್ಪಟ್ಟ ಹಾಗೂ ಆರ್ಥಿಕ ಸಂಕಷ್ಟದ ಕಾರಣಗಳಿಂದ ಭರ್ತಿಯಿಂದ ವಿನಾಯಿತಿ ನೀಡಲಾಗಿದೆ.

ಉಳಿದ 910 ಹುದ್ದೆಗಳಲ್ಲಿ 469 ಹುದ್ದೆಗಳಿಗೆ ಭರ್ತಿ ಮಾಡಲು ಪ್ರಕಟಣೆ ಹೊರಡಿಸಲಾಗಿದ್ದು, 441 ಹುದ್ದೆಗಳಿಗೆ ಪ್ರಕಟಣೆ ಹೊರಡಿಸಬೇಕಾಗಿರುತ್ತದೆ.

ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಿಗಳಿಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಶೀಘ್ರವಾಗಿ ತುಂಬುವಂತೆ ನಿರ್ದೇಶನ ನೀಡಲಾಗಿದೆ.

ಅನುಬಂಧ –I

ಪ್ರಶ್ನೆ ಸಂಖ್ಯೆ (317)

2012–13ನೇ ಸಾಲಿನಲ್ಲಿ ಇಲಾಖೆಗಳಲ್ಲಿ ಭರ್ತಿ ಮಾಡಲಾಗಿರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರ

ಕ್ರಮ ಸಂಖ್ಯೆ	ಇಲಾಖೆಗಳು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
1	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	18	4	22
2	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ	65	9	74
3	ಕೃಷಿ ವಿಶ್ವವಿದ್ಯಾಲಯ ರಾಯಚೂರು	4	0	4
4	ಕೃಷಿವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು	5	10	15
5	ರೇಷ್ಮೆ ಇಲಾಖೆ	1	0	1
6	ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ	1	2	3
7	ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ	8	2	10
8	ಕರ್ನಾಟಕ ರಾಜ್ಯ ಬೀಜ ಪ್ರಮಾಣ ನಿಗಮ ನಿಯಮಿತ	0	1	1
9	ಲೋಕೋಪಯೋಗಿ ಇಲಾಖೆ	18	3	21
10	ಕರ್ನಾಟಕ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ ನಿಯಮಿತ	0	1	1
11	ಆರ್ಥಿಕ ಸಾಂಖ್ಯಿಕ ಇಲಾಖೆ	1	0	1
12	ರಾಜ್ಯ ಕಾರ್ಮಿಕ ವಿಮಾ ನಿಗಮ ಇಲಾಖೆ (ಮೆಡಿಕಲ್ ಇನ್ಸೂರೆನ್ಸ್)	0	1	1
13	ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ	39	19	58
14	ಕರ್ನಾಟಕ ಭವನ	0	1	1
15	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	0	1	1
16	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ, ಹುಬ್ಬಳ್ಳಿ	10	0	10
17	ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ	5	5	10
18	ಡಿ.ಸಿ.ಸಿ ಬ್ಯಾಂಕ್	1	1	2
19	ಹಾಲು ಒಕ್ಕೂಟ ಬೆಳಗಾಂ	1	1	2
20	ಹಾಲು ಒಕ್ಕೂಟ ಬಿಜಾಪುರ	0	2	2
	ಒಟ್ಟು	177	63	240

ಪು.ತಿ.ನೋ.

ಅನುಬಂಧ –1				
ಪ್ರಶ್ನೆ ಸಂಖ್ಯೆ (317)				
2013–14ನೇ ಸಾಲಿನಲ್ಲಿ ಇಲಾಖೆಗಳಲ್ಲಿ ಭರ್ತಿ ಮಾಡಲಾಗಿರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರ				
ಕ್ರಮ ಸಂಖ್ಯೆ	ಇಲಾಖೆಗಳು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
1	ಪಿಕಾರ್ಡ್ ಬ್ಯಾಂಕ್.	28	4	32
2	ಹಾಪ್‌ಕಾಮ್ಸ್ ಮತ್ತಿತರ ಸಂಸ್ಥೆಗಳು	16	7	23
3	ಶ್ರೀ.ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರ	1	3	4
4	ಕರ್ನಾಟಕ ವಿದ್ಯುತ್ ಕಾರ್ಖಾನೆ	8	1	9
5	ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ	1	0	1
6	ಮೈಸೂರು ಸೇಲ್ಸ್‌ಇಂಟರ್ ನ್ಯಾಷನಲ್ ಲಿಮಿಟೆಡ್	3	1	4
7	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.	13	0	13
8	ರೇಷ್ಮೆ ಇಲಾಖೆ	5	0	5
9	ಲೋಕೋಪಯೋಗಿ ಇಲಾಖೆ	8	0	8
10	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	23	35	58
11	ಕೃಷಿವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು	2	1	3
12	ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್	0	2	2
13	ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನದ ವಿಶ್ವವಿದ್ಯಾನಿಲಯ	1	0	1
	ಒಟ್ಟು	109	54	163